# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಮೀನುಗಾರಿಕೆ ಸಂಚಾರಿ ವಿಸ್ತರಣಾ ಮತ್ತು ರೋಗ ಪತ್ತೆ ವಾಹನ ಒದಗಿಸಿ ಮೀನುಗಾರಿಕೆಯಲ್ಲಿರುವ ವಿವಿಧ ಅವಕಾಶಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ:- (1) ಆದೇಶ ಸಂಖ್ಯೆ: ಪಸಂಮೀ/95/ಮೀಇಯೋ/2015, ದಿನಾಂಕ: 27-02-2016.

(2) ಪತ್ರ ಸಂಖ್ಯೆ: ಮೀನಿ/45/ವಿಸ್ತರಣೆ/2015, ದಿನಾಂಕ: 04-03-2016.

******

## ಪ್ರಸ್ತಾವನೆ:

ರಾಜ್ಯ ಸರ್ಕಾರವು 2015-16ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ಪ್ರತಿ ಕಂದಾಯ ವಿಭಾಗಕ್ಕೆ ಒಂದು ಮೀನುಗಾರಿಕೆ ಸಂಚಾರಿ ವಿಸ್ತರಣಾ ಮತ್ತು ರೋಗ ಪತ್ತೆ ವಾಹನ ಒದಗಿಸಿ ಮೀನುಗಾರಿಕೆಯಲ್ಲಿರುವ ವಿವಿಧ ಅವಕಾಶಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುವುದು" ಎಂದು ಘೋಷಿಸಿರುತ್ತದೆ.

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, ಪ್ರತಿ ಕಂದಾಯ ವಿಭಾಗಕ್ಕೆ ಒಂದು ಮೀನುಗಾರಿಕೆ ಸಂಚಾರಿ ವಿಸ್ತರಣಾ ಮತ್ತು ರೋಗಪತ್ತೆ ವಾಹನ ಒದಗಿಸಿ ಮೀನುಗಾರಿಕೆಯಲ್ಲಿರುವ ವಿವಿಧ ಅವಕಾಶಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಯೋಜನೆಯಡಿ ಪ್ರತಿ ಕಂದಾಯ ವಿಭಾಗಕ್ಕೆ ಒಂದರಂತೆ ಕೇಂದ್ರ ಸರ್ಕಾರದ ಡಿ.ಜಿ.ಎಸ್. ಮತ್ತು ಡಿ ಅನುಮೋದಿಸಿರುವ ದರಪಟ್ಟಿಯ ಪ್ರಕಾರ ಪ್ರತಿ ವಾಹನದ ಖರೀದಿ ಮೌಲ್ಯ ರೂ.6,45,365-00 (ತೆರಿಗೆ ಸೇರಿ) ಗಳಂತೆ ಒಟ್ಟು ನಾಲ್ಕು (04) ಮೀನುಗಾರಿಕೆ ಸಂಚಾರಿ ವಿಸ್ತರಣಾ ಮತ್ತು ರೋಗಪತ್ತೆ ವಾಹನಗಳನ್ನು ಮಾತ್ರ ಒಟ್ಟಾರೆ ರೂ.25,81,460-00 ಗಳಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರ ಪತ್ರದಲ್ಲಿ, 2016-17ನೇ ಸಾಲಿನ ಕೇಂದ್ರ ಸರ್ಕಾರದ ಆಯವ್ಯಯ ಪ್ರಕಾರ ವಾಹನದ ಮೂಲ ದರ ಮತ್ತು ತೆರಿಗೆಗಳು ಹೆಚ್ಚಾದ ಪ್ರಯುಕ್ತ ವಾಹನ ಸರಬರಾಜು ಮಾಡುವ ಸಂಸ್ಥೆಯು ಪರಿಷ್ಕೃತ ಕ್ರೆಡಿಟ್ ಬಿಲ್ಲನ್ನು ಸಲ್ಲಿಸಿದ್ದು, ಒಂದು ವಾಹನದ ದರ ರೂ.6,62,895-00 ಆಗಿರುತ್ತದೆ. ಆದುದರಿಂದ, ದಿನಾಂಕ: 27-02-2016 ರ ಆದೇಶದಲ್ಲಿ ನೀಡಿರುವ ಪ್ರತಿ ವಾಹನ ಮೌಲ್ಯ ರೂ.6,45,365-00 ಗಳಾಗಿದ್ದು (ತೆರಿಗೆ ಸೇರಿ) ಪರಿಷ್ಕೃತ ದರಪಟ್ಟಿಯ ಪ್ರಕಾರ ಪ್ರತಿ ವಾಹನ ದರ (ಎಲ್ಲಾ ತೆರಿಗೆ ಸೇರಿ) ರೂ.6,62,895-00 ಆಗುವುದರಿಂದ, ನಾಲ್ಕು ವಾಹನಗಳನ್ನು ಒಟ್ಟು ರೂ.26,51,580-00 ಗಳ ವೆಚ್ಚದಲ್ಲಿ ಸದರಿ ಸಂಸ್ಥೆಯಿಂದ ಖರೀದಿಸಲು ಪರಿಷ್ಕೃತ ಸರ್ಕಾರದ ಆದೇಶವನ್ನು ಹೊರಡಿಸಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ 95 ಮೀಇಯೋ 2015, ಬೆಂಗಳೂರು ದಿನಾಂಕ: 15-03-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸಂಖ್ಯೆ: ಪಸಂಮೀ/95/ ಮೀಇಯೋ/2015 ದಿನಾಂಕ: 27-02-2016 ರ ಆದೇಶವನ್ನು ಭಾಗಶಃ ಮಾರ್ಪಡಿಸಿ, ಪ್ರತಿ ಕಂದಾಯ ವಿಭಾಗಕ್ಕೆ ಒಂದು ಮೀನುಗಾರಿಕೆ ಸಂಚಾರಿ ವಿಸ್ತರಣಾ ಮತ್ತು ರೋಗಪತ್ತೆ ವಾಹನ ಒದಗಿಸಿ ಮೀನುಗಾರಿಕೆಯಲ್ಲಿರುವ ವಿವಿಧ ಅವಕಾಶಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಯೋಜನೆಯಡಿ ಪ್ರತಿ ಕಂದಾಯ ವಿಭಾಗಕ್ಕೆ ಒಂದರಂತೆ ಕೇಂದ್ರ ಸರ್ಕಾರದ ಡಿ.ಜಿ.ಎಸ್. ಮತ್ತು ಡಿ ಅನುಮೋದಿಸಿರುವ ದರಪಟ್ಟಿಯ ಪ್ರಕಾರ ಪ್ರತಿ ವಾಹನದ ಖರೀದಿ ಮೌಲ್ಯ ರೂ.6,62,895-00 (ತೆರಿಗೆ ಸೇರಿ) (ಆರು ಲಕ್ಷದ ಅರವತ್ತೆರಡು ಸಾವಿರದ ಎಂಟುನೂರ ತೊಂಬತ್ತೈದು ರೂಪಾಯಿಗಳು ಮಾತ್ರ)ಗಳಂತೆ ಒಟ್ಟು ನಾಲ್ಕು (04) ಮೀನುಗಾರಿಕೆ ಸಂಚಾರಿ ವಿಸ್ತರಣಾ ಮತ್ತು ರೋಗಪತ್ತೆ ವಾಹನಗಳನ್ನು ಮಾತ್ರ ಹೀಗೆ ಒಟ್ಟಾರೆ ರೂ.26,51,580-00 (ಇಪ್ಪತ್ತಾರು ಲಕ್ಷದ ಐವತ್ತೊಂದು ಸಾವಿರದ ಐನೂರು ಎಂಬತ್ತು ರೂಪಾಯಿಗಳು ಮಾತ್ರ)ಗಳನ್ನು ಲೆಕ್ಕ ಶೀರ್ಷಿಕೆ 2405-ಮೀನುಗಾರಿಕೆ-00-109-ವಿಸ್ತರಣೆ ಮತ್ತು ತರಬೇತಿ-0-01-ಸಂಶೋಧನೆ, ವಿಸ್ತರಣೆ, ವಸ್ತುಪ್ರದರ್ಶನ ಮತ್ತು ತರಬೇತಿ-051-ಸಾಮಾನ್ಯ ವೆಚ್ಚಗಳು (ಯೋಜನೆ) ಇದರಲ್ಲಿ 2015-16ನೇ ಸಾಲಿನಲ್ಲಿ ಒದಗಿಸಿದ ಅನುದಾನದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ/66/ಪಿಎಫ್‌ಒ/2015, ದಿನಾಂಕ: 03-11-2015 ಮತ್ತು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ/752/ವೆಚ್ಚ-4/2015, ದಿನಾಂಕ: 22-02-2016 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

15/3/16
(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

15/3/16
(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)
15/3/16

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಬೆಂಗಳೂರು.

2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಜಂಟಿ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ಸಂಬಂಧಪಟ್ಟ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
9) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಮ್ / ಹೆಚ್ಚುವರಿ ಪ್ರತಿಗಳು.